**ಕರ್ನಾಟಕ ಸರ್ಕಾರ**

**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ**

**File No:** DTE-ADMI0ACM2/34/2020

ಆಯುಕ್ತರ ಕಛೇರಿ,
ತಾಂತ್ರಿಕ ಶಿಕ್ಷಣ ಭವನ,
ಅರಮನೆ ರಸ್ತೆ, ಬೆಂಗಳೂರು-560 001.
ದಿನಾಂಕ:15-12-2020.

-:: ಸು ತ್ತೋಲೆ ::-

ವಿಷಯ: **2020-21ನೇ ಸಾಲಿನ ಡಿಪ್ಲೋಮಾ ತರಗತಿಗಳನ್ನು ಪ್ರಾರಂಭಿಸುವಲ್ಲಿ ತಾತ್ಕಾಲಿಕ ಶೈಕ್ಷಣಿಕ ವೇಳಾಪಟ್ಟಿಯ ಕುರಿತು.**

-0000000-

2020-21ನೇ ಸಾಲಿನಲ್ಲಿ ರಾಜ್ಯದ ಎಲ್ಲಾ ಪಾಲಿಟೆಕ್ನಿಕ್‌ಗಳಲ್ಲಿ ಡಿಪ್ಲೋಮಾ ತರಗತಿಗಳ ಪ್ರವೇಶಾತಿ ಪ್ರಕ್ರಿಯೆಯು ಮುಕ್ತಾಯಗೊಂಡಿದ್ದು, **ಸರ್ಕಾರದ ಆದೇಶ ಸಂ. ಇಡಿ 334 ಯುಎನ್‌ಇ 2020, ಬೆಂಗಳೂರು, ದಿನಾಂಕ:09-11-2020ರ ಆದೇಶದಂತೆ ಕೋವಿಡ್-19 ಸಾಂಕ್ರಾಮಿಕ ರೋಗದ ಹಿನ್ನೆಲೆಯಲ್ಲಿ ರಾಜ್ಯದ ಎಲ್ಲಾ ಡಿಪ್ಲೋಮಾ ಕಾಲೇಜುಗಳಲ್ಲಿ ಪ್ರಮಾಣಿತ ಕಾರ್ಯಚರಣಾ ವಿಧಾನಗಳನ್ನು ಅಳವಡಿಸಿಕೊಂಡು ಶೈಕ್ಷಣಿಕ ಚಟುವಟಿಕೆಗಳನ್ನು ಪ್ರಾರಂಭಿಸಿ**, ಪ್ರವೇಶ ಪಡೆದ ಅಭ್ಯರ್ಥಿಗಳಿಗೆ ನಿಗಧಿತ ಅವಧಿಯೊಳಗೆ ಪಾಠ ಪ್ರವಚನಗಳನ್ನು ಪೂರ್ಣಗೊಳಿಸುವ ನಿಟ್ಟಿನಲ್ಲಿ ತಾತ್ಕಾಲಿಕ ಶೈಕ್ಷಣಿಕ ವೇಳಾಪಟ್ಟಿಯನ್ನು ಈ ಕೆಳಕಂಡಂತೆ ನಿಗಧಿಪಡಿಸಲಾಗಿದೆ.

**-: 2020-21ನೇ ಸಾಲಿನ ತಾತ್ಕಾಲಿಕ ಶೈಕ್ಷಣಿಕ ವೇಳಾಪಟ್ಟಿ :-**

| ಕ್ರ.ಸಂ. | ಶೈಕ್ಷಣಿಕ ಕಾರ್ಯಕ್ರಮ | ಅವಧಿ/ದಿನಾಂಕ | |
|---|---|---|---|
| | | ಪ್ರಾರಂಭ | ಮುಕ್ತಾಯ |
| 01. | **01ನೇ ಮತ್ತು 03ನೇ ಸೆಮಿಸ್ಟರ್‌ನ ಆನ್‌ಲೈನ್ ಮತ್ತು ಭೌತಿಕ ಸಂಪರ್ಕ ತರಗತಿಗಳ (contact classes)** ಪ್ರಾರಂಭ ಹಾಗೂ ಮುಕ್ತಾಯ | 17-11-2020 | 13-03-2021 |
| 02. | ಅಂತಿಮ ವರ್ಷದ **05ನೇ ಸೆಮಿಸ್ಟರ್‌ನ ಭೌತಿಕ ತರಗತಿಗಳ ಅಥವಾ ಆನ್‌ಲೈನ್ ಮತ್ತು ಭೌತಿಕ ಸಂಪರ್ಕ ತರಗತಿಗಳ (contact classes)** ಪ್ರಾರಂಭ ಹಾಗೂ ಮುಕ್ತಾಯ | | |
| 03. | **01, 03 ಮತ್ತು 05ನೇ ಸೆಮಿಸ್ಟರ್ ಪರೀಕ್ಷೆಗಳು** | | |
| | ಅ) ಪ್ರಾಯೋಗಿಕ | 18-03-2021 | 27-03-2021 |
| | ಆ) ಥಿಯರಿ | 31-03-2021 | 20-04-2021 |
| 04. | **02, 04 ಮತ್ತು 06ನೇ ಸೆಮಿಸ್ಟರ್‌ನ ತರಗತಿಗಳ** ಪ್ರಾರಂಭ ಹಾಗೂ ಮುಕ್ತಾಯ | 26-04-2021 | 25-08-2021 |
| 05. | **02, 04 ಮತ್ತು 06ನೇ ಸೆಮಿಸ್ಟರ್ ಪರೀಕ್ಷೆಗಳು** | | |
| | ಅ) ಪ್ರಾಯೋಗಿಕ | 30-08-2021 | 08-09-2021 |
| | ಆ) ಥಿಯರಿ | 13-09-2021 | 04-10-2021 |
| 06. | ಆಂತರಿಕ ಪರೀಕ್ಷೆಗಳು | | |
| | (1) ಮೊದಲನೆಯ | 06ನೇ ವಾರದಲ್ಲಿ | |
| | (2) ಎರಡನೇಯ | 10ನೇ ವಾರದಲ್ಲಿ | |
| | (3) ಮೂರನೇಯ | 14ನೇ ವಾರದಲ್ಲಿ | |

-ಮು.ತಿ.ನೋ

| | | |
|---|---|---|
| 07 | ಆಂತರಿಕ ಪರೀಕ್ಷೆಗಳ ಅಂಕಗಳ ಪರಿಶೀಲನೆ | 15ನೇ ವಾರದಲ್ಲಿ |
| 08 | ಹಾಜರಾತಿ ಕೊರತೆ ಹಾಗೂ ಮತೀತ್ತರ ಶೈಕ್ಷಣಿಕ ಚಟುವಟಿಕೆಗಳ ಬಗ್ಗೆ ವಿದ್ಯಾರ್ಥಿಗಳು ಮತ್ತು ಪೋಷಕರ ಜೊತೆ ಸಾಂತ್ವನ ಕಾರ್ಯಕ್ರಮ | 08ನೇ ವಾರದಲ್ಲಿ |

**(*2020–21ನೇ ಸಾಲಿನ ತಾತ್ಕಾಲಿಕ ಶೈಕ್ಷಣಿಕ ವೇಳಾಪಟ್ಟಿಯ, ತುರ್ತು ಅಗತ್ಯ ನೈಸರ್ಗಿಕ ಪರಿಸ್ಥಿತಿಗೆ ಅನುಗುಣವಾಗಿ, ಅಲ್ಪ ಬದಲಾವಣೆಗೆ ಒಳಪಟ್ಟಿರುತ್ತೆ*)**

ಕೋವಿಡ್–19 ಸಾಂಕ್ರಾಮಿಕ ರೋಗದ ಹಿನ್ನೆಲೆಯಲ್ಲಿ ಮುನ್ನೆಚರಿಕೆ ಕ್ರಮಗಳನ್ನು ಅನುಸರಿಸಿ ಪ್ರವೇಶ ಪಡೆದ ಅಭ್ಯರ್ಥಿಗಳಿಗೆ ನಿಯಮಾನುಸಾರ ಪಾಠ ಪ್ರವಚನಗಳನ್ನು ನಡೆಸಲು ಸೂಕ್ತ ವ್ಯವಸ್ಥೆ ಮಾಡುವುದಲ್ಲದೆ, ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಮೇಲ್ಕಂಡ ತಾತ್ಕಾಲಿಕ ಶೈಕ್ಷಣಿಕ ವೇಳಾಪಟ್ಟಿಯನುಸಾರ ಡಿಪ್ಲೋಮಾ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಪ್ರಮಾಣಿತ ಕಾರ್ಯಚರಣಾ ವಿಧಾನಗಳನ್ನು ಅಳವಡಿಸಿಕೊಂಡು ವಿಶೇಷ ತರಗತಿಗಳನ್ನು ತೆಗೆದುಕೊಳ್ಳುವುದರ ಮೂಲಕ ಪಠ್ಯಕ್ರಮದನ್ವಯ ನಿಗಧಿತ ಪಾಠ ಪ್ರವಚನಗಳನ್ನು ಮುಗಿಸುವಲ್ಲಿ ಕ್ರಮತೆಗೆದುಕೊಂಡು ಕಾರ್ಯದರ್ಶಿಗಳು, ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು ಇವರಿಗೆ ವರದಿ ಮಾಡುವುದು.

ಪ್ರಯುಕ್ತ, ಇದನ್ನು ರಾಜ್ಯದ ಎಲ್ಲಾ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳು ಗಮನದಲ್ಲಿರಿಸಿಕೊಂಡು ನಿಯಮಗಳ ಪ್ರಕಾರ ಪಾಠ ಪ್ರವಚನಗಳನ್ನು ಮುಕ್ತಾಯಗೊಳಿಸುವಲ್ಲಿ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಲಾಗಿದೆ.

**ಆಯುಕ್ತರು**

**ಇವರಿಗೆ,**

**ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರುಗಳಿಗೆ – ಸೂಕ್ತ ಕ್ರಮಕ್ಕಾಗಿ ಹಾಗೂ ಅನುಸರಣೆಗಾಗಿ.**

**ಪ್ರತಿ:–**

1. ಮಾನ್ಯ ಆಯುಕ್ತರ ಆಪ್ತಶಾಖೆಗೆ.
2. ಮಾನ್ಯ ನಿರ್ದೇಶಕರ ಆಪ್ತಶಾಖೆಗೆ.
3. ಜಂಟಿ ನಿರ್ದೇಶಕರು(ಆಡಳಿತ), ಕಾಲೇಜು&ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
4. ಜಂಟಿ ನಿರ್ದೇಶಕರು(ಪರೀಕ್ಷೆ), ಕಾಲೇಜು&ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
5. ಆಡಳಿತಾಧಿಕಾರಿಗಳು, ಕಾಲೇಜು&ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು
6. ಸಾರ್ವಜನಿಕ ಸಂಪರ್ಕಾಧಿಕಾರಿಗಳು, ಕಾಲೇಜು&ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
7. ಇ–ಆಡಳಿತ ವಿಭಾಗಕ್ಕೆ – ಸದರಿ ಸುತ್ತೋಲೆಯನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸುವುದು.
8. ರಿಜಿಸ್ಟ್ರಾರ್(ಪರೀಕ್ಷೆ), ಕಾಲೇಜು&ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
9. ಕಛೇರಿ ಪ್ರತಿ.

**ಪ್ರತಿ ಇವರಿಗೆ ಮಾಹಿತಿಗಾಗಿ:–**

ಸರ್ಕಾರದ ಅಧೀನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಬಹುಮಹಡಿಗಳ ಕಟ್ಟಡ, ಬೆಂಗಳೂರು.